ಪ್ರತಿಧ್ವನಿಗೆ ಸಾಜಿದಾ, ಸೂರಿಗೂ ಕಸಿವಿಸಿ ಆಗಿದ್ದೂ ಇದ್ದೇ ಇತ್ತು. ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಈಜಾಡಿದ್ದು, ಇತರೆ ಪ್ರದೇಶಗಳಲ್ಲಿ ನಾವು ಕಳೆದ ಮಧುರಾತಿ ಮಧುರ ಕ್ಷಣಗಳನ್ನು ನನ್ನ ಹೃದಯದ ಕವಾಟಿನಲ್ಲಿ ಭದ್ರಪಡಿಸಿದ್ದೇನೆ. ನಾಳೆ ನಾವು ಬೆಂಗಳೂರಿಗೆ ಹೋಗಬೇಕೆನ್ನುವಾಗ ಕುಲಕರ್ಣಿ ಅವರು ಮುದ್ದಾದ ಒಂದು ದೊಡ್ಡ ಗಿಫ್ಟ್ ಪ್ಯಾಕ್ ಜೊತೆ ಪತ್ರವನ್ನೂ ಕೊಟ್ಟು 'ದಯವಿಟ್ಟು ಓದಿ' ಎನ್ನುತ್ತಾ, ಮಾಯಿಯ ಕೋಣೆಯತ್ತ ಹೊರಟರು. ಗಾಬರಿ, ಕುತೂಹಲದ ಕಟ್ಟೆ ಒಡೆಯುವುದೊರಳಗೆ ಪತ್ರ ಬಿಡಿಸತೊಡಗಿದೆ.

'ಬಾಷಾ... ಕೆಲವು ವಿಷಯಗಳನ್ನ ಬಿಡಿಸಿ ಹೇಳಲಿಕ್ಕಾಗದೆ ಈ ಪತ್ರಾ ಬರೆದೀನಿ... ನೀವ್ ಮಾಯೀನ ಪ್ರೀತಿಸ್ತಿರೋದೂ ನಂಗೊತ್ತದ! ಆಕಿ ಜೊತಿ ಇಷ್ಟ್ ವರ್ಷ ನೀವ್ ತಪಸಿನ ಹಾಂಗ ಸ್ನೇಹಾ ಬೆಳಸಿದ್ದೂ ಖಬರದ. ಆಕೀನೇ ಇದೆಲ್ಲಾ ತಿಳಿಸ್ಯಾಳ. ತಪ್ಪು ಒಪ್ಪಿನ ಪ್ರಶ್ನೆ ಇಲ್ಲಿಲ್ಲಾ. ಯಾಕಂದ್ರಾ ಆಕಿ ನನಗ ಜೀವ, ಭಾವ ಎಲ್ಲಾ! ದುರಂತಾಂದ್ರ, ಆಕಿಗೆ 'ಲುಕೇಮಿಯಾ(ರಕ್ತದ ಕ್ಯಾನ್ಸರ್)' ಅದಾ. ಯಾವ ಕ್ಷಣ ಸಾವು ಬರ್ತದೋ! ಡಾಕ್ಟ್ರ ಹೇಳೋ ಹಾಂಗ, ಆಕಿಯ ಸಂತೋಷ ಯಾವುದ್ರಲ್ಲಿ ಇರ್ತದೋ, ವಿಲ್‌ಪವರ್ ಯಾವುದ್ರಿಂದ ಜಾಸ್ತಿಯಾಗ್ತದೋ, ಅದ್ಕಾ ನಾವ್ ಸಪೋರ್ಟ್ ಮಾಡ್ಬೇಕು. ಆಕೀ ಮನಸಿನ ವಿರುದ್ಧ ನಡೆದ್ರ, ನಾಳೆ ಬರೋ ಸಾವು ಇಂದೇ... ಈಗ್ಲೇ ಬರಬಹುದು. ಮೆಡಿಕಲ್ ರಿಪೋರ್ಟ್ ಪ್ರಕಾರ, ಆಕಿ ಎಂಟು ವರ್ಷಗಳ ಹಿಂದೆಯೇ ಸಾಯಬೇಕಿತ್ತು. ಆದ್ರಾ, ನಿಮ್ ಪ್ರೀತಿ, ಸ್ನೇಹ, ಸಲುಗೆ, ಒಲವು ಏನಾದ್ರೂ ಅನ್ನಿ. ಆಕೀನ ಜೀವಂತವಾಗಿಟ್ಟು. ಇನ್ನೊಂದ್ ವಿಷಯ; ಸಾಜಿದಾಳ ದುಂಡು ಮುಖ, ತೀರಿ ಹೋದ ನನ ತಂಗೀನ ನೆನಪಿಸ್ತದ. ಅದ್ಕ, ನನ ತಂಗಿಯ ಚಿನ್ನದ ಒಡ್ಯಾಣ ಕೊಟ್ಟೀನಿ. ತಗೊಳ್ಳಾಕ ಬೇಕು. ವಾತ್ಸಲ್ಯ ಮಯಿ ಸುರೇಶ್ಗೂ, ಸೋದರ ಹಾಂಗಿರುವ ನಿಮಗೂ ಏನ್ ಕೊಟ್ರೂ ಸಾಲ್ದ ಪಾ... ನಿಮ್ಮ, ಕುಲಕರ್ಣಿ.'

ಪ್ರೀತಿಯ ಓದುಗಾ... ಒಂದು ಮೃದುವಾದ, ಮಾಧುರ್ಯದ ಧ್ವನಿಯ ಹಿಂದೆ ಇಂಥ ಕಾರ್ಗತ್ತಲು ಅಡ ಗಿರುವುದು ನನಗೆ ಗೊತ್ತೇ ಇರಲಿಲ್ಲ. ಜ್ವಾಲಾಮುಖಿಯೊಂದು ಪರ್ವತವ ಸೀಳಿ, ನೆಲ ಮುಗಿಲಿಗೆ ಜಿಗಿ ಜಿಗಿದಂತೆಯೂ, ಕಡಲ ಒಡಲೊಂದು ಬಿಡ ಬಿಡದೆ ಒಡೆದಂತೆಯೂ, ವಾಸ್ತವದ ರೌದ್ರಾವತಾರ ಕುಪ್ಪಳಿಸಿ ಕುಣಿ ಕುಣಿದಂತೆಯೂ... ಇನ್ನೂ ಏನೇನೋ ಆದಂತಾಗ ತೊಡಗಿತು. ಸಾಜಿದಾ, ಸೂರಿಗೂ ವಿಷಯ ಗೊತ್ತಾಗಿ ಇಬ್ಬರ ಕೆನ್ನೆಯ ಮೇಲೂ ಸಿರಿ ಜೋಗದ ಝರಿ ಹರಿಯತೊಡಗಿತ್ತು.

## ಎಂ. ಮಹಮ್ಮದ್ ಬಾಷ ಗೂಳ್ಯಂ

ಕವಿ, ಕತೆಗಾರ ಮಹಮ್ಮದ್ ಬಾಷ ಆಂಧ್ರಪ್ರದೇಶದ ಗಡಿಗ್ರಾಮ ಗೂಳ್ಯಂನವರು. ತಮ್ಮ ಆರಂಭಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿ ಪಡೆದ ಅವರು ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಪದವಿ, ಮದ್ರಾಸ್ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಮದ್ರಾಸ್ ವಿಶ್ವವಿದ್ಯಾಲಯದಿಂದ ಎಂ.ಫಿಲ್, ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ದೊರಕಿದೆ. ಹಲವು ಸಿನಿಮಾಗಳಿಗೆ ಗೀತರಚನೆ, ಧಾರಾವಾಹಿಗಳಿಗೆ ಶೀರ್ಷಿಕೆ ಗೀತೆಗಳನ್ನು ಬರೆದಿರುವ ಅವರು, ಸ್ನಾತಕೋತ್ತರ ವ್ಯಾಸಂಗದ ಅವಧಿಯಲ್ಲೇ ಮದ್ರಾಸಿನ 'ಚಂದಮಾಮ' ಮಾಸಿಕದಲ್ಲಿ ಕೆಲಕಾಲ ಉಪ ಸಂಪಾದಕರಾಗಿ ಕೆಲಸ ಮಾಡಿದ್ದರು. ಪ್ರಸ್ತುತ ಪತ್ರಕರ್ತರಾಗಿ ಕೆಲಸ ನಿರ್ವಹಿಸುತ್ತಿರುವ ಅವರ ಐದು ಪುಸ್ತಕಗಳು ಪ್ರಕಟವಾಗಿವೆ.